**ಪತ್ರಿಕಾ ಪ್ರಕಟಣೆ**

ವಿಜಯಪುರ

ದಿನಾಂಕ: 16.07.2021.

**1] ಬಬಲೇಶ್ವರ ಪೊಲೀಸ ಠಾಣೆ ಗುನ್ನೆ ನಂ: 98/2021 ಕಲಂ: 279, 337, 338,304(ಎ) ಐ.ಪಿ.ಸಿ.**

ದಿನಾಂಕ: 15.07.2021 ರಂದು ಮದ್ಯಾನ: 01.00 ಗಂಟೆ ಸುಮಾರಿಗೆ ಇದರಲ್ಲಿಯ ಆರೋಪಿತರಾದ ಎ–1 ಕಾರ ನಂ ಕೆಎ:28 ಪಿ:4516 ನೇದ್ದರ ಚಾಲಕ ಮಾರುತಿ ಫಕಿರಪ್ಪ ತಳವಾರ ಸಾ॥ ರೆಡ್ಡೆರ ತಿಮ್ಮಾಪೂರ ತಾ॥ ಬದಾಮಿ ಜಿ॥ ಬಾಗಲಕೋಟ ಎ–2 ಕಾರ ನಂ ಕೆಎ:28 ಝಡ್:1723 ನೇದ್ದರ ಚಾಲಕ ಸಿದ್ದಪ್ಪ ದುಂಡಪ್ಪ ತಳೆವಾಡ ಸಾ॥ರೋಣಿಹಾಳ ತಾ॥ ಕೋಲ್ಹಾರ ಆರೋಪಿ ಅ.ನಂ 1 ನೇದವನಾದ ಮಾರುತಿ ಫಕೀರಪ್ಪ ತಳವಾರ ಈತನು ಅತೀ ವೇಗ ಮತ್ತು ನಿರ್ಲಕ್ಷತನದಿಂದ ಚಲಾಯಿಸುತ್ತಾ ಹೊರಟಾಗ ಅದೇ ವೇಳೆಗೆ ಎದುರುಗಡೆ ಕೋಲ್ಹಾರ ಕಡೆಯಿಂದ ವಿಜಯಪೂರ ಕಡೆಗೆ ಎರ್ಟಗಾ ಕಾರ ನಂ ಕೆಎ:28 ಝಡ್:1723 ನೇದ್ದರ ಚಾಲಕ ಆರೋಪಿ ಅ.ನಂ 2 ನೇದವನಾದ ಸಿದ್ದಪ್ಪ ತಳೇವಾಡ ಈತನು ಸಹ ಸದರ ಕಾರನ್ನು ಅತೀ ವೇಗ ಮತ್ತು ನಿರ್ಲಕ್ಷತನದಿಂದ ಚಲಾಯಿಸುತ್ತಾ ಬಂದು ವಿಜಯಪೂರ ಹುಬ್ಬಳ್ಳಿ ರಸ್ತೆಯ ರೋಣೀಹಾಳ ಕ್ರಾಸ್‌ದ ಹತ್ತಿರ ಎದುರುಗಡೆಯಿಂದ ಡಿಕ್ಕಿ ಹೊಡೆದು ಅಪಘಾತ ಪಡಿಸಿ ಕಾರಿನಲ್ಲಿದ್ದ ಪಿರ್ಯಾದಿ ಎಡಗಾಲಿಗೆ, ಹೊಟ್ಟೆಗೆ, ಕೈಗೆ, ಭುಜಕ್ಕೆ ಒಳಪೆಟ್ಟು ಪಡಿಸಿ, ಶಾಂತಮ್ಮ ಇವಳಿಗೆ ತಲೆಗೆ, ಮುಖಕ್ಕೆ ಗಾಯಪೆಟ್ಟು ಪಡಿಸಿದ್ದು, ಚಂದ್ರಶೇಖರನಿಗೆ ತಲೆಗೆ, ಎದೆಗೆ, ಮುಖಕ್ಕೆ, ರಕ್ತ ಗಾಯ ಒಳಪೆಟ್ಟು ಪಡಿಸಿದ್ದು, ಪಿರ್ಯಾದಿಯ ಮಕ್ಕಳಾದ ಕ್ಯಾಥರಿನ್ ಮತ್ತು ಸಾಮುವೇಲ್ ಇವರಿಗೆ ಗಾಯ ಪೆಟ್ಟು ಪಡಿಸಿದ್ದು, ಎದುರುಗಡೆ ಕಾರಿನಲ್ಲಿದ್ದ ಆರೋಪಿ ಚಾಲಕ ಸಿದ್ದಪ್ಪ ತಳೆವಾಡ, ವಿಶ್ವನಾಥ ಸೊನ್ನದ, ಗಂಗಾದರ ಕೋಲಕಾರ, ಗುರುಲಿಂಗ ಜಗದಾಳ, ಮಲ್ಲಪ್ಪ ಬೀಳಗಿ, ಸಂತೋಷ ಬುಡಿಟೆ ಸಾ॥ ಎಲ್ಲರೂ ರೋಣಿಹಾಳ ಇವರಿಗೂ ಸಹ ಗಾಯ ಪೆಟ್ಟುಗಳಾಗಿದ್ದು, ಮುಂದೆ 108 ಅಂಬುಲೇನ್ ವಾಹನದಲ್ಲಿ ಉಪಚಾರಕ್ಕಾಗಿ ಭಾಗ್ಯವಂತಿ ಆಸ್ಪತ್ರೆಗೆ ಕರೆದುಕೊಂಡು ಹೊರಟಾಗ ಮಾರ್ಗ ಮದ್ಯದಲ್ಲಿ ಪಿರ್ಯಾದಿಯ ಅತ್ತೆ ಶಾಂತಮ್ಮ ಇವಳು ಮದ್ಯಾನ: 02.00 ಘಂಟೆ ಸುಮಾರಿಗೆ ಮೃತಪಟ್ಟಿದ್ದು, ಪಿರ್ಯಾದಿಯ ಮಾವ ಆಸ್ಪತ್ರೆಯಲ್ಲಿ ಉಪಚಾರ ಹೊಂದುವಾಗ ಸಾಯಂಕಾಲ 05.00 ಘಂಟೆ ಸುಮಾರಿಗೆ ಮರಣಹೊಂದುವಂತೆ ಮಾಡಿದ್ದು ಅಲ್ಲದೇ ಇದರಲ್ಲಿಯ ಇಬ್ಬರೂ ಕಾರ ಚಾಲಕರು ತಾವು ಸಹ ಗಾಯ ಪೆಟ್ಟು ಹೊಂದಿದ್ದು, ಸದರಿ ಅಪಘಾತಕ್ಕೆ ಇಬ್ಬರೂ ಕಾರ ಚಾಲಕರ ಅತೀ ವೇಗ ಮತ್ತು ನಿರ್ಲಕ್ಷತನದ ಚಾಲನಯೇ ಕಾರಣ ಕಾರಣ ವಿರುತ್ತದೆ. ಈ ಬಗ್ಗೆ ಮಾರ್ತಾ ವಿಲಾಸ ಮುರನಾಳ ಸಾ॥ ಮಿಶನ ಕಂಪೌಂಡ ಹತ್ತಿರ ವಿಜಯಪೂರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 15.07.2021 ರಂದು ಬಬಲೇಶ್ವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 119/2021 ಕಲಂ: 87 ಕೆ.ಪಿ.ಆ್ಯಕ್ಟ**

ದಿನಾಂಕ 15.07.2021 ರಂದು 16.10 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಕಾಂತಪ್ಪ ನಾಗಪ್ಪ ಬೆನಕನಳ್ಳಿ 2] ಕೆಂಚಪ್ಪ ಹಿರಗಪ್ಪ ಲಿಂಗದಳ್ಳಿ 3] ಸಿದ್ದಪ್ಪ ಚಂದ್ರಾಮ ಸುಲ್ತಾನ 4] ಕೆಂಚಪ್ಪ ಚಂದ್ರಾಮ ಸಣ್ಣತಂಗಿ 5] ಯಮನಪ್ಪ ಹಿರಗಪ್ಪ ಆಲಮೇಲ 6] ಬಸವರಾಜ ರಾಮಚಂದ್ರಪ್ಪ ಹೆಗ್ಗಣದೊಡ್ಡಿ 7] ಚಂದ್ರಾಮ ನಿಂಗಪ್ಪ ಹಿಕ್ಕಣಗುತ್ತಿ ಸಾ: ಎಲ್ಲರೂ ಸಂಗೋಗಿ ತಾ: ಇಂಡಿ ಇವರು ಸಂಗೋಗಿ ಗ್ರಾಮದ ಹಣಮಂತ ದೇವರ ಗುಡಿಯ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ತಮ್ಮ ತಮ್ಮ ಫಾಯಿದೆಗೋಸ್ಕರ ಇಸ್ಪೇಟ ಎಲೆಗಳ ಸಹಾಯದಿಂದ ಪಣಕ್ಕೆ ಹಣ ಹಚ್ಚಿ ಅಂದರ ಬಾಹರ ಅಂಬುವ ಮನ್ನಾ ಜೂಜಾಟವನ್ನು ಆಡುತ್ತಿರುವಾಗ ಸಿಕ್ಕ ಅಪರಾಧ. ಜಪ್ತಾದ ಮುದ್ದೇಮಾಲು 1) ರೊಖ ಹಣ ಒಟ್ಟು–2550/–ರೂಗಳು. 2) 52 ಇಸ್ಪೇಟ್ ಎಲೆಗಳು ಈ ಬಗ್ಗೆ ಸ:ತ: ಮಾಳಪ್ಪ ಪೂಜಾರಿ ಪಿಎಸ್ಐ ಇಂಡಿ ಗ್ರಾಮೀಣ ಪೊಲೀಸ ಠಾಣೆ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 15.07,2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಬ ಬಾಗೇವಾಡಿ ಪೊಲೀಸ ಠಾಣೆ ಗುನ್ನಾ. ನಂ: 120/2021 ಕಲಂ: 78 [3] ಕೆ.ಪಿ.ಆ್ಯಕ್ಟ**

ದಿನಾಂಕ 14.07.2021 ರಂದು 14:40 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಅಬ್ದುಲ್‌ರಜಾಕ ಅಮೀರಹ್ಮದ ನಂದವಾಡಗಿ ಸಾ: ಮದಿನಾ ನಗರ ಬ ಬಾಗೇವಾಡಿ. 2] ಕಾಶೀಮ್ ದಸ್ತಗೀರಸಾಬ ವಾಲಿಕಾರ ಸಾ: ಬ ಬಾಗೇವಾಡಿ. ಇವರು ಬ ಬಾಗೇವಾಡಿ ಪಟ್ಟಣದಲ್ಲಿ ಐಡಿಎಫ್‌ಸಿ ಬ್ಯಾಂಕ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ತಮ್ಮ ಪಾಯ್ದೇಗೋಸ್ಕರ ಅಂಕಿಸಂಖ್ಯೆಗಳ ಆಧಾರದ ಮೇಲೆ ಒಂದು 1 ರೂಪಾಯಿಗೆ 80 ರೂಪಾಯಿ ಕೊಡುವುದಾಗಿ ಹೇಳಿ, ಕೆಲವು ಜನ ಸಾರ್ವಜನಿಕರಿಗೆ ಸೇರಿಸಿ ಸಾರ್ವಜನಿಕರಿಂದ ಹಣವನ್ನು ಪಡೆದುಕೊಂಡು ಬಾಂಬೆ ಮಟಕಾ ಜೂಜಾಟದ ನಡೆಸಿದ ಕಾಲಕ್ಕೆ ಸಿಕ್ಕಿದ್ದು ಇರುತ್ತದೆ. ಜಪ್ತಾದ ಮಾಲು: 1] ರೊಖ ಹಣ 750 ರೂ. 2] ಓಸಿ ನಂಬರ ಬರೆದ ಚೀಟಿ ಎರಡು ಕಿ:00–00 3] ಬಾಲಪೆನ್ ಎರಡು ಕಿ:00–00 ಈ ಬಗ್ಗೆ ಸ:ತ: ಬಸವರಾಜ. ಎಮ್. ಪಾಟೀಲ ಪೊಲೀಸ ಇನ್ಸಪೆಕ್ಟರ. ಬಸವನ ಬಾಗೇವಾಡಿ. ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 15.07,2021 ರಂದು ಬ ಬಾಗೇವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಮುದ್ದೇಬಿಹಾಳ ಪೊಲೀಸ ಠಾಣೆ ಗುನ್ನಾ. ನಂ: 114/2021 ಕಲಂ: 78 [3] ಕೆ.ಪಿ.ಆ್ಯಕ್ಟ**

ದಿನಾಂಕ: 15.07.2021 ರಂದು 10.10 ಗಂಟೆ ಸುಮಾರಿಗೆ ಇದರಲ್ಲಿ ಆರೋಪಿತರಾದ 1] ಇಬ್ರಾಹಿಮ್ ಮುರ್ತುಜಸಾಬ ಮೋಮಿನ ಸಾ: ನಾಲತವಾಡ ಬಾಹರ್‌ಪೇಟಿ ಓಣಿ. 2] ಅಬ್ದುಲ್‌ರಜಾಕ ಹಜರತ್ ಹುಡೇದ ಸಾ: ನಾಲತವಾಡ. ಇವರು ನಾಲತವಾಡ ಪಟ್ಟಣದ ಬಸ್ ಸ್ಟ್ಯಾಂಡ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಸಾರ್ವಜನಿಕರಿಗೆ ಸೇರಿಸಿಕೊಂಡು ತಮ್ಮ ತಮ್ಮ ಪಾಯದೇಗೋಸ್ಕರ ಒಂದು ರೂಪಾಯಿಗೆ 80 ರೂಪಾಯಿ ಕೊಡುವ ಕರಾರಿನ ಮೇಲೆ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಸಾರ್ವಜನಿಕರಿಂದ ಹಣ ಪಡೆದುಕೊಂಡು ಓಸಿ ನಂಬರ ಬರೆದುಕೊಟ್ಟು ಕಲ್ಯಾಣ ಮಟಕಾ ಅಂಬುವ ಓ.ಸಿ ಜೂಜಾಟವನ್ನು ನಡೆಸುತ್ತಿದ್ದಾಗ ಸಿಕ್ಕಿದ್ದು ಇರುತ್ತದೆ. ಈ ಬಗ್ಗೆ ಸ:ತ: ಎಮ್. ಬಿ ಬಿರಾದಾರ ಪಿ.ಎಸ್.ಐ (ಕಾಸು) ಮುದ್ದೇಬಿಹಾಳ ಠಾಣೆ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 15.07,2021 ರಂದು ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.